ಸಾಕ್ಷಿಯನ್ನು ದಿನಾಂಕ **23-01-2025** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **2** ರಿಂದ **8** ನೇ ಪ್ರತಿವಾದಿಯರ ಪರ ಶ್ರೀ ಡಿ.ಎನ್.ಹೆಚ್. ವಕೀಲರಿಂದ.

ನನ್ನ ತಂದೆ ಕಾಳೇಗೌಡ ಮತ್ತು ತಾಯಿ ನಿಂಗಮ್ಮ ತೀರಿಕೊಂಡಿರುತ್ತಾರೆಂದರೆ ಸರಿ. ಹೊಸನಗರ ತಾಲ್ಲೂಕು ಕವಲಿ ಗ್ರಾಮ ನಮ್ಮ ಮೂಲ ಊರು ಎಂದರೆ ಸರಿ. ನನಗೆ ರತ್ನಮ್ಮ, ಪದ್ಮಾವತಿ, ಗಾಯಿತ್ರಿ, ಉಮಾದೇವಿ ಮತ್ತು ಶ್ರೀಮತಿ ಒಟ್ಟು **5** ಜನ ಸಹೋದರಿಯರು ಎಂದರೆ ಸರಿ. ನಾನು, ಸುರೇಂದ್ರ, ಸುಧಾಕರ್, ದೇವೇಂದ್ರ ಮತ್ತು ಶ್ರೀಧರ್ ಒಟ್ಟು **5** ಜನ ಸಹೋದರರು ಎಂದರೆ ಸರಿ. ನಮ್ಮೆಲ್ಲರ ಮದುವೆ ನಮ್ಮ ತಂದೆ-ತಾಯಿ ಮಾಡಿಸಿರುತ್ತಾರೆ ಎಂದರೆ? ಸಾಕ್ಷಿಯು ನನ್ನ ಮದುವೆ ನಮ್ಮ ತಂದೆ-ತಾಯಿ ಮಾಡಿಸಿರುವುದಿಲ್ಲ ಮತ್ತು ನನ್ನ ಮದುವೆ ನನ್ನ ಹೆಂಡತಿ ಮನೆಯಲ್ಲಿ ಆಗಿರುತ್ತದೆ ಎಂದು ಹೇಳುತ್ತಾರೆ. ನಮ್ಮ ತಂದೆ-ತಾಯಿಯವರು **1, 2** ಮತ್ತು **4** ನೇ ಪ್ರತಿವಾದಿಯರ ಹಾಗೂ **3** ನೇ ಪ್ರತಿವಾದಿಯ ಮದುವೆ ಮಾಡಿರುತ್ತಾರೆ. **5** ಮತ್ತು **6** ನೇ ಪ್ರತಿವಾದಿಯರು ಉಳಿದವರ ಮದುವೆ ಮಾಡಿರುತ್ತಾರೆ. **9** ನೇ ಪ್ರತಿವಾದಿಯ ಮದುವೆ ಆಗಿ ಸುಮಾರು **10**

ವರ್ಷ ಮೇಲಾಯಿತು. ನಮ್ಮ ತಂದೆಯ ಮೂಲ ಊರು ಯಾವುದು ಎಂದರೆ? ಸಾಕ್ಷಿಯು ಕವಲಿ ಗ್ರಾಮ ಎಂದು ಹೇಳುತ್ತಾರೆ. ಕವಲಿ ಗ್ರಾಮದಲ್ಲಿ ನಮ್ಮ ತಂದೆಗೆ ಪಿತ್ರಾರ್ಜಿತ ಸ್ವತ್ತು ಇತ್ತಾ ಎಂದರೆ? ಸಾಕ್ಷಿಯು ಗೇಣಿ ಜಮೀನು ಇತ್ತು ಎಂದು ಹೇಳುತ್ತಾರೆ. ಸದರಿ ಗೇಣಿ ಜಮೀನಿನ ಮಾಲೀಕರು ಯಾರು ಎಂದರೆ? ಸಾಕ್ಷಿಯು ಹಾಲಿಗಿ ಗುಂಡಪ್ಪಗೌಡರು ಎಂದು ಹೇಳುತ್ತಾರೆ. ಯಾವ ಯಾವ ಸರ್ವೇ ನಂಬರ್ ನಲ್ಲಿ ಎಷ್ಟೆಷ್ಟು ಗೇಣಿ ಜಮೀನು ಇತ್ತು ಎಂದರೆ? ಸಾಕ್ಷಿಯು ಸರ್ವೇ ನಂ.**38** ರಲ್ಲಿ **3** ಎಕರೆ **18** ಗುಂಟೆ, ಸರ್ವೇ ನಂ.**43** ರಲ್ಲಿ **1** ಎಕರೆ **24** ಗುಂಟೆ, ಸರ್ವೇ ನಂ.**44/2** ರಲ್ಲಿ **18** ಗುಂಟೆ ಭಾಗಯ್ತು ಜಮೀನು ಎಂದು ಹೇಳುತ್ತಾರೆ. ಸದರಿ ಮೂರು ಜಮೀನುಗಳ ಪೈಕಿ ಸರ್ವೇ ನಂ. **44/2** ಅನ್ನು ಹೊರತುಪಡಿಸಿ ಉಳಿದ ಎರಡು ಜಮೀನುಗಳು ಮುಳುಗಡೆ ಆಗಿರುತ್ತದೆ ಮತ್ತು ಮನೆಯು ಸಹ ಮುಳುಗಡೆ ಆಗಿರುತ್ತದೆ. ಸದರಿ ಮನೆ ಹುಲ್ಲಿನ ಮನೆ ಆಗಿತ್ತು. ಸದರಿ ಹುಲ್ಲಿನ ಮನೆಯ ಬಗ್ಗೆ ನಮ್ಮ ತಂದೆಯವರಿಗೆ ಯಾವುದೇ ದಾಖಲೆ ಇರಲಿಲ್ಲ ಎಂದರೆ? ಸಾಕ್ಷಿಯು ಪರಿಹಾರದ ಹಣ ಸಿಕ್ಕಿದೆ ಎಂದು ಹೇಳುತ್ತಾರೆ. ವರಾಹಿ ಡ್ಯಾಮ್ ಜಲ ವಿದ್ಯುತ್ ಯೋಜನೆ ಅಡಿಯಲ್ಲಿ ಮೇಲ್ಕಾಣಿಸಿದ ಸ್ವತ್ತುಗಳು ಮುಳುಗಡೆ ಆಗಿರುತ್ತದೆ.

ಮುಳುಗಡೆಯಾದಗ ಪರಿಹಾರವನ್ನು ಭೂಮಾಲೀಕರಿಗೆ ಕೊಟ್ಟಿರುತ್ತಾರೆಂದರೆ**?** ಸಾಕ್ಷಿಯು ನಮ್ಮ ತಂದೆಗೆ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ**.** ನಮ್ಮ ತಂದೆ ಭೂ ನ್ಯಾಯಮಂಡಳಿಗೆ ಗೇಣಿ ಅರ್ಜಿಕೊಟ್ಟು ಗೇಣಿ ವ್ಯಾಜ್ಯ ಮಾಡಿದ್ದಾರಾ ಎಂದರೆ**?** ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ**.** ಯಾವ ವರ್ಷ ಮುಳುಗಡೆಯಾಗಿದೆ ಎಂದರೆ**?** ಸಾಕ್ಷಿಯು **1980** ರಲ್ಲಿ ಮುಳುಗಡೆ ಪ್ರಾರಂಭವಾಯಿತು ಎಂದು ಹೇಳುತ್ತಾರೆ**.** ಮುಳುಗಡೆಯಾಗುವ ಪೂರ್ವದಲ್ಲಿ ಯಾವ ಯಾವ ಜಮೀನುಗಳು ಮುಳುಗಡೆಯಾಗುತ್ತವೆ ಎಂದು ನೋಟೀಸ್ ಕೊಡುತ್ತಾರೆ ಎಂದರೆ**?** ಸಾಕ್ಷಿಯು ನಮ್ಮ ತಂದೆಯವರಿಗೆ ನೋಟೀಸ್ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ**.** ಮುಳುಗಡೆಯಾಗುವ ಸ್ವತ್ತುಗಳ ಬಗ್ಗೆ ನಕ್ಷೆ ತಯಾರಿಸುತ್ತಾರೆಂದರೆ ಸರಿ**.** ನಂತರ ಪರಿಹಾರ ಕೊಡುತ್ತಾರೆಂದರೆ ಸರಿ**.** ಫಲಾನುಭವಿಗಳಿಗೆ ಅವಾರ್ಡ್ ನೋಟೀಸ್ ಕೊಡುತ್ತಾರೆಂದರೆ ಸರಿ**.** ನೋಟೀಸ್ ಬಂದವರು ಹೋಗಿ ಸಹಿ ಮಾಡಿ ಪರಿಹಾರದ ಹಣ ಪಡೆದುಕೊಳ್ಳಬೇಕು ಎಂದರೆ ಸರಿ**.** ಮುಳುಗಡೆಯಾದ ಜಮೀನಿನ ದಾಖಲೆಯನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ**.** ಮುಳುಗಡೆ ಪರಿಹಾರ ಹಣ ಎಷ್ಟು ಬಂದಿದೆ ಎಂದು ದಾಖಲೆ

ಪರಿಶೀಲನೆ ಮಾಡಿದ್ದೀರಾ ಎಂದರೆ**?** ದಾಖಲೆ ಪರಿಶೀಲನೆ ಮಾಡಿರುವುದಿಲ್ಲ ಆದರೆ ಪರಿಹಾರದ ಹಣ ಬಂದಿರುವ ವಿಚಾರ ಗೊತ್ತು ಎಂದು ಹೇಳುತ್ತಾರೆ**.** ಗೇಣಿ ಸ್ವತ್ತುಗ ದಾಖಲೆಗಳು ಮತ್ತು ಪರಿಹಾರದ ಹಣ ಬಂದಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲಿಕ್ಕೆ ನನಗೆ ಯಾವುದೇ ತೊಂದರೆ ಇಲ್ಲಾ ಎಂದರೆ**?** ಸಾಕ್ಷಿಯು ಹಾಜರು ಪಡಿಸುತ್ತೇನೆ ಎಂದು ಹೇಳುತ್ತಾರೆ**.** ಪರಿಹಾರದ ಹಣವನ್ನು ನಮ್ಮ ತಂದೆಯವರು ಪಡೆದುಕೊಂಡಿರುತ್ತಾರೆ ಎಂದರೆ**?** ಸಾಕ್ಷಿಯು **5** ನೇ ಪ್ರತಿವಾದಿ ಪರಿಹಾರದ ಹಣ ಪಡೆದುಕೊಂಡಿದ್ದು ನಾವು ಸಹಿ ಹಾಕಿ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ**.** ನಮ್ಮ ತಂದೆಯವರು ಸ್ವಲ್ಪ ಪರಿಹಾರದ ಹಣ ತೆಗೆದುಕೊಂಡಿರುತ್ತಾರೆ**.** ಸದರಿ ಪರಿಹಾರದ ಹಣದಿಂದ ನಮ್ಮ ತಂದೆಯವರು ನಮ್ಮ ಅಕ್ಕ**-**ತಂಗಿಯರ ಮದುವೆ ಮಾಡಿರುತ್ತಾರೆ ಎಂದರೆ**?** ಸಾಕ್ಷಿಯು ಪರಿಹಾರದ ಹಣ ಬರುವುದಕ್ಕಿಂತ ಮುಂಚೆ ಎಲ್ಲರ ಮದುವೆ ಆಗಿ ಹೋಗಿತ್ತು ಎಂದು ಹೇಳುತ್ತಾರೆ**.**

ನಾನು **8** ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಈಗ ಹಾಲಿ ನನ್ನ ಹೆಂಡತಿಯ ಮನೆ ತೀರ್ಥಹಳ್ಳಿ ತಾಲ್ಲೂಕು ಚಿಕ್ಕಳೂರು ಗ್ರಾಮದಲ್ಲಿ ಇರುತ್ತೇನೆ ಎಂದರೆ ಸರಿ. ನಮ್ಮ ಪತ್ನಿಯ ಮನೆಯವರು ನನ್ನ ಹಿಂದಿನ ಸಂಬಂಧಿಕರಲ್ಲ. ನಾನು ಎಷ್ಟು ವರ್ಷಗಳ ಹಿಂದೆ ನನ್ನ ಪತ್ನಿ ಮನೆಗೆ ಹೋಗಿರುತ್ತೇನೆ ಎಂದರೆ**?** ಸಾಕ್ಷಿಯು **1983** ರಲ್ಲಿ ಹೋಗಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಮಾವನಿಗೆ ಕೇವಲ **2** ಜನ ಹೆಣ್ಣು ಮಕ್ಕಳು. ನನ್ನ ಹೆಂಡತಿ ದೊಡ್ಡವರು.

ಮುಂದುವರಿದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**)**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.